## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1314

ಮಾನ್ಯ ಸದಸ್ಯರ ಹೆಸರು : ಶ್ರೀ ಹೆಚ್.ಪಿ.ಸುಧಾಮ್ ದಾಸ್

ಉತ್ತರಿಸುವ ದಿನಾಂಕ : 22-08-2025

ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | SCSP/TSP ಕಾಯ್ದೆಯ ಸೆಕ್ಷನ್ 6(7) ರಲ್ಲಿ ಕಡ್ಡಾಯಗೊಳಿಸಿರುವ ಅನ್ವಯ ಸಮಾಜ ಕಲ್ಯಾಣ ಇಲಾಖೆಯ ನೋಡಲ್ ಏಜೆನ್ಸಿಯು 2014-15ನೇ ಹಣಕಾಸು ವರ್ಷದಿಂದ 2023-24ನೇ ಹಣಕಾಸು ವರ್ಷದ ಅವಧಿಯಲ್ಲಿ SCSP/TSP ಅನುದಾನದ ಅಡಿಯಲ್ಲಿ ವ್ಯಯಿಸಲಾಗಿರುವ ಹಣದ ಉಪಯೋಗ ಕುರಿತಂತೆ ಪ್ರತಿ ವರ್ಷ ಸೋಷಿಯಲ್ ಆಡಿಟಿಂಗ್ ನಡೆಸಲಾಗಿದೆಯೇ; | ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಕಾಯ್ದೆ 2013ರ ಸೆಕ್ಷನ್ 6(7) ಮತ್ತು ನಿಯಮಗಳು 2017ರ ನಿಯಮ 4(3)ರ ಪ್ರಕಾರ ನೋಡಲ್ ಏಜೆನ್ಸಿ/ನೋಡಲ್ ಇಲಾಖೆಯು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳ ಅನುಷ್ಠಾನದ ಪರಿಣಾಮದ ಬಗ್ಗೆ ಸಾಮಾಜಿಕ ಪರಿಶೋಧನೆ ಮತ್ತು ಮೌಲ್ಯಮಾಪನವನ್ನು ಮಾಡಬೇಕಾಗಿರುತ್ತದೆ. ಅದರಂತೆ ಅನುಷ್ಠಾನಗೊಂಡಿರುವ ಕಾರ್ಯಕ್ರಮಗಳ ಸೋಷಿಯಲ್ ಆಡಿಟಿಂಗ್ ಮತ್ತು ಮೌಲ್ಯಮಾಪನವನ್ನು ನಡೆಸಲಾಗುತ್ತಿದೆ. |
| ಆ) | ಹೌದಾದಲ್ಲಿ, ಪ್ರತಿವರ್ಷ ನಡೆಸಲಾಗಿರುವ ಸೋಶಿಯಲ್ ಆಡಿಟಿಂಗ್ ಫಲಿತಾಂಶದ ಅನ್ವಯ 2014-15ನೇ ಸಾಲಿನಿಂದ 2023-24 ನೇ ಸಾಲಿನವರೆಗೆ ಪ್ರತಿವರ್ಷ SCSP/TSP ಅನುದಾನದಿಂದ ಉಂಟಾಗಿರುವ ಪ್ರತಿ ವರ್ಷದ ಪರಿಶಿಷ್ಟ ಜಾತಿ-ಪರಿಶಿಷ್ಟ ಸಮುದಾಯದ ಮಾನವ ಅಭಿವೃದ್ಧಿ ಸೂಚ್ಯಂಕದ ಏರಿಕೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವುದು; | 11 ಯೋಜನೆಗಳ ಬಗ್ಗೆ ಸೋಷಿಯಲ್ ಆಡಿಟಿಂಗ್ ಮತ್ತು 26 ಯೋಜನೆಗಳ ಮೌಲ್ಯಮಾಪನ ಪೂರ್ಣಗೊಂಡಿರುತ್ತದೆ. 28 ಯೋಜನೆಗಳ ಮೌಲ್ಯಮಾಪನ ಹಾಗೂ 2 ಯೋಜನೆಗಳ ಸೋಷಿಯಲ್ ಆಡಿಟ್ ಪ್ರಗತಿಯಲ್ಲಿದೆ. ಶಿಕ್ಷಣ ಆರೋಗ್ಯ ಜೀವನ ಮಟ್ಟ ಇತ್ಯಾದಿ ಮಾನವ ಅಭಿವೃದ್ಧಿ ಸೂಚ್ಯಂಕದ ಏರಿಕೆಗೆ ಸಂಬಂಧಿಸಿದ ದಾಖಲೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ. SCSP/TSP ಯೋಜನೆಗಳ ಬಗ್ಗೆ ಸೋಷಿಯಲ್ ಆಡಿಟ್/ಮೌಲ್ಯಮಾಪನವನ್ನು ನಡೆಸಲಾಗುತ್ತಿರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವ ಅಗತ್ಯತೆ ಕಂಡುಬಂದಿರುವುದಿಲ್ಲ. |
| ಇ) | ಈ ಸೋಶಿಯಲ್ ಆಡಿಟಿಂಗ್ ಅನ್ನು ಯಾವುದಾದರೂ ವರ್ಷದಲ್ಲಿ ನಡೆಸಲು ವಿಫಲರಾಗುವ ಮೂಲಕ ಸೆಕ್ಷನ್ 16(7) ರನ್ನು ಉಲ್ಲಂಘಿಸಿದ್ದಲ್ಲಿ, 2014ನೇ ಇಸವಿಯಿಂದ ಇದುವರೆಗೂ ಸೆಕ್ಷನ್ 24ರ ಅನ್ವಯ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳಾವುವು? (ಮಾಹಿತಿ ಒದಗಿಸುವುದು ) | |

**ಸಕಇ 486 ಎಸ್‌ಎಲ್‌ಪಿ 2025**

(ಡಾ: ಹೆಚ್.ಸಿ.ಮಹದೇವಪ್ಪ)

**ಸಮಾಜ ಕಲ್ಯಾಣ ಸಚಿವರು**

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಪಿ. ಸುಧಾಮ್ ದಾಸ್ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ; 1314 ಕ್ಕೆ ಅನುಬಂಧ.**

**ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳ ಅನುಷ್ಠಾನದಿಂದ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಆಗಿರುವ ಬದಲಾವಣೆಯ ವಿವರ.**

**ಕೃಷಿ ಮತ್ತು ಸಂಬಂಧಿತ ವಲಯ:-**


1. **<u>ಕೃಷಿ ಭೂಮಿ ಹಿಡುವಳಿ:</u>**

- 2015ನೇ ಕೃಷಿ ಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಒಟ್ಟು 118.05 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಇರುತ್ತದೆ.
- 2010ರ ಕೃಷಿ ಗಣತಿಯ ಪ್ರಕಾರ ರಾಜ್ಯದ ಒಟ್ಟು ಕೃಷಿ ಭೂಮಿ - 121.61 ಲಕ್ಷ ಹೆಕ್ಟೇರ್.
- ಒಟ್ಟಾರೆ 3% ರಷ್ಟು ಕೃಷಿ ಭೂಮಿ ಹಿಡುವಳಿಯಲ್ಲಿ ಇಳಿಕೆ ಉಂಟಾಗಿರುತ್ತದೆ.
- ಆದರೆ, ಪ.ಜಾತಿಯವರ ಭೂ ಹಿಡುವಳಿಯು 2010ರ ಕೃಷಿ ಗಣತಿಯಲ್ಲಿ 10.74 ಲಕ್ಷ ಹೆಕ್ಟೇರ್ ಇದ್ದು, 2015ರ ಕೃಷಿ ಗಣತಿಯಲ್ಲಿ 11.08 ಲಕ್ಷ ಹೆಕ್ಟೇರ್ ಗಳಿಗೆ ಏರಿಕೆಯಾಗಿರುತ್ತದೆ.
- ಅದೇ ರೀತಿ ಪ.ಪಂಗಡದವರ ಭೂ ಹಿಡುವಳಿ 7.05 ಲಕ್ಷ ಹೆಕ್ಟೇರ್ ಗಳಿಂದ 7.30 ಲಕ್ಷ ಹೆಕ್ಟೇರ್ ಗಳಿಗೆ ಏರಿಕೆಯಾಗಿರುತ್ತದೆ.
- ಇದು ಅನುಕ್ರಮವಾಗಿ 0.34 ಲಕ್ಷ ಹೆಕ್ಟೇರ್ (84,016 ಎಕರೆಗಳು) ಮತ್ತು 0.25 ಲಕ್ಷ ಹೆಕ್ಟೇರ್ (61,776 ಎಕರೆಗಳು) ಕೃಷಿ ಭೂಮಿಯ ಪ್ರಮಾಣ ಹೆಚ್ಚಿಗೆ ಆಗಿರುತ್ತದೆ.

**ಕೃಷಿ ಭೂಮಿ ಹಿಡುವಳಿಯ ವಿವರ.**

| ಪ್ರವರ್ಗ | 2010ರ ಕೃಷಿ ಗಣತಿ | 2015ರ ಕೃಷಿ ಗಣತಿ |
|---|---|---|
| ಎಸ್.ಸಿ | 8.8% | 9.4% |
| ಎಸ್.ಟಿ | 5.8% | 6.2% |
| ಇತರೆ | 85.4% | 84.4% |

**(ಮೂಲ – ಕೃಷಿ ಗಣತಿ 2015)**




**ಕೃಷಿ ವಲಯಕ್ಕೆ ಅನುದಾನ ಹಂಚಿಕೆ:**

- ಕಳೆದ 10 ವರ್ಷಗಳಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಕೃಷಿ ಮತ್ತು ಸಂಬಂಧಿತ ಇಲಾಖೆಗಳಿಗೆ ಒಟ್ಟು ರೂ. 12,039 ಕೋಟಿಗಳನ್ನು ವಾರ್ಷಿಕ ಸರಾಸರಿ 4% ನಷ್ಟು ಅನುದಾನ ಹಂಚಿಕೆ ಮಾಡಲಾಗುತ್ತಿದೆ.

- ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ, ಮೀನುಗಾರಿಕೆ ಇತ್ಯಾದಿ ಇಲಾಖೆಗಳು ವಿವಿಧ ಸಹಾಯಧನ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ನೆರವು ನೀಡುತ್ತಿದೆ.
- ಇದರೊಂದಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಅನುಕೂಲವಾಗುವಂತೆ ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

**ಸಾಮಾಜಿಕ ಪರಿಶೋಧನೆ/ಮೌಲ್ಯಮಾಪನ ವರದಿಗಳಂತೆ ಆದಾಯದಲ್ಲಿ ಹೆಚ್ಚಳ :**

- ಕೃಷಿ ಮತ್ತು ತೋಟಗಾರಿಕೆ ಇಲಾಖೆಯಿಂದ ಕೈಗೊಂಡಿರುವ ಸಾಮಾಜಿಕ ಪರಿಶೋಧನೆಯ ಅನ್ವಯ ರೈತರು ಸರಾಸರಿ ರೂ.35,675/- ಗಳನ್ನು ವಾರ್ಷಿಕ ಆದಾಯ ಪಡೆಯುತ್ತಿದ್ದಾರೆ.
- ಕೃಷಿ ಉಪಕರಣಗಳನ್ನು 90% ಸಹಾಯಧನದಲ್ಲಿ ಒದಗಿಸುತ್ತಿದ್ದು, ಸದರಿ ಉಪಕರಣಗಳನ್ನು ಬಾಡಿಗೆಗೆ ನೀಡುವುದರಿಂದ ಹೆಚ್ಚಿನ ಆದಾಯ ಪಡೆಯುತ್ತಿದ್ದಾರೆ.
- ತೋಟಗಾರಿಕೆ ಬೆಳೆಗಳಿಂದ ರೈತರು ವಾರ್ಷಿಕವಾಗಿ ಸರಾಸರಿ ರೂ.78,467/- ಆದಾಯ ಪಡೆಯುತ್ತಿದ್ದಾರೆ.
- ಪಬ್ಲಿಕ್ ಅಫೇರ್ಸ್ ಸೆಂಟರ್ ಸಂಸ್ಥೆ, ಬೆಂಗಳೂರು ಇವರು ಮಾಡಿರುವ ಮೌಲ್ಯಮಾಪನದಂತೆ ಕೃಷಿ ಭಾಗ್ಯ ಯೋಜನೆಯಿಂದ ವಾರ್ಷಿಕವಾಗಿ ರೂ.11,155/- ಗಳಷ್ಟು ಕೃಷಿ ಆದಾಯ ಹೆಚ್ಚಾಗಿರುತ್ತದೆ.

**ಮಾನವ ಸಂಪನ್ಮೂಲ ಅಭಿವೃದ್ಧಿ ವಲಯ**

**ಅ) ಶಿಕ್ಷಣ :**

ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಯು ಅನುಷ್ಠಾನ ಮಾಡುತ್ತಿರುವ ವಿವಿಧ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಿಂದ ಗುಣಮಟ್ಟದ ಶಿಕ್ಷಣವನ್ನು ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. 6 ರಿಂದ 14 ವರ್ಷದ ವಿದ್ಯಾರ್ಥಿಗಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲಾಗುತ್ತಿದ್ದು, ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯ ಸೌಲಭ್ಯ, ಕ್ರೈಸ್ ವಸತಿ ಶಾಲೆಗಳ ಮೂಲಕ ವಸತಿ ಸಹಿತ ಶಿಕ್ಷಣ, ಇತ್ಯಾದಿಗಳಿಂದ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚಾಗಿರುತ್ತದೆ. ಅಲ್ಲದೇ, ಅರ್ಧದಲ್ಲಿ ಶಾಲೆ ಬಿಡುವವರ ಸಂಖ್ಯೆ ಕಡಿಮೆ ಆಗುತ್ತಿರುವುದನ್ನು ಗಮನಿಸಬಹುದಾಗಿದೆ. ವಿವರ ಈ ಕೆಳಗಿನಂತಿದೆ.

**1. 2011ರ ಜನಗಣತಿಯಂತೆ ಸಾಕ್ಷರತಾ ಪ್ರಮಾಣ ಈ ಕೆಳಗಿನಂತಿದೆ.**

| | ಒಟ್ಟು | ಎಸ್.ಸಿ | ಎಸ್.ಟಿ |
|---|---|---|---|
| **ಪುರುಷರು** | 83% | 74% | 71% |
| **ಮಹಿಳೆಯರು** | 68% | 56% | 53% |
| **ಒಟ್ಟು** | 75% | 67% | 62% |

| | ಒಟ್ಟು | ಎಸ್.ಸಿ | ಎಸ್.ಟಿ |
|---|---|---|---|
| **ನಗರ ಪ್ರದೇಶ** | 86% | 77% | 66% |
| **ಗ್ರಾಮೀಣ ಪ್ರದೇಶ** | 69% | 60% | 51% |
| **ಒಟ್ಟು** | 75% | 67% | 62% |

**ಟಿಪ್ಪಣಿ**: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಾಕ್ಷರತಾ ಮಟ್ಟವನ್ನು ಹೆಚ್ಚಿಸಲು ಕ್ರಮವಹಿಸಬೇಕಾಗಿದೆ. 2021ರ ಜನಗಣತಿಯನ್ನು ನಡೆಸಿದ್ದಲ್ಲಿ ಪ್ರಸ್ತುತ ಪರಿಸ್ಥಿತಿಯು ತಿಳಿಯುತ್ತದೆ.

**GER (Gross Enrolment Ratio) ಮತ್ತು NER (Net Enrolment Ratio) ವಿವರ.**

**ಶಾಲಾ ಶಿಕ್ಷಣ :**

**2021-22**

| Category | Primary level | Upper primary level | Secondary Level |
|---|---|---|---|
| | GER | GER | GER |
| Overall | 108.2 | 105.5 | 94.7 |
| SC | 103.9 | 105.1 | 95.3 |
| ST | 107.6 | 104.8 | 91.8 |

(Source: UDISE 2021-22)

**Drop-out rate of social categories across years**

| Category | 2010-2011 | | 2021-2022 | |
|---|---|---|---|---|
| | Primary | Upper primary | Primary | Upper primary |
| Overall | 2.09 | 5.47 | 0 | 1.08 |
| SC | 4.05 | 8.79 | 0.46 | 1.83 |
| ST | 1.95 | 7.06 | 0.67 | 1.77 |

(Source: Education in Karnataka, 2010-2011, GoK and UDISE 2021-2022, GoI)

ಮೇಲ್ಕಂಡ ದತ್ತಾಂಶಗಳನ್ನು ಪರಿಶೀಲಿಸಿದಾಗ 2010-11ನೇ ಸಾಲಿಗೆ ಹೋಲಿಸಿದಲ್ಲಿ 2021-22ನೇ ಸಾಲಿನಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಅರ್ಧದಲ್ಲಿ ಶಾಲೆ ಬಿಡುವವರ ಪ್ರಮಾಣ 2.09 ರಷ್ಟು ಇಳಿಕೆಯಾಗಿರುತ್ತದೆ. **ಪರಿಶಿಷ್ಟ ಜಾತಿಯವರಲ್ಲಿ 3.59 ರಷ್ಟು ಇಳಿಕೆ ಕಂಡುಬಂದಿದ್ದು, ಪರಿಶಿಷ್ಟ ಪಂಗಡದವರಲ್ಲಿ 1.28 ರಷ್ಟು ಇಳಿಕೆಯಾಗಿರುತ್ತದೆ.**

ಹಿರಿಯ ಪ್ರಾಥಮಿಕ ಶಿಕ್ಷಣದಲ್ಲಿ ಒಟ್ಟಾರೆಯಾಗಿ ಅರ್ಧದಲ್ಲಿ ಶಾಲೆ ಬಿಡುವವರ ಪ್ರಮಾಣದಲ್ಲಿ 4.39 ರಷ್ಟು ಇಳಿಕೆ ಕಂಡುಬಂದಿದ್ದು, **ಪರಿಶಿಷ್ಟ ಜಾತಿಯಲ್ಲಿ 6.96 ಹಾಗೂ ಪರಿಶಿಷ್ಟ ಪಂಗಡದಲ್ಲಿ 5.29 ರಷ್ಟು ಇಳಿಕೆ ಕಂಡುಬಂದಿರುವುದು ಅತ್ಯುತ್ತಮ ಬೆಳವಣಿಗೆಯಾಗಿರುತ್ತದೆ.**

ಅರ್ಧದಲ್ಲಿ ಶಾಲೆ ಬಿಡುವವರ ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿರುವುದು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿರುವುದಕ್ಕೆ ಸಾಕ್ಷಿಯಾಗಿರುತ್ತದೆ.

**ಟಿಪ್ಪಣಿ:** 2021-2022 ದತ್ತಾಂಶಗಳ ಪ್ರಕಾರ ಪ್ರಾಥಮಿಕ & ಹಿರಿಯ ಪ್ರಾಥಮಿಕ ಶಿಕ್ಷಣಗಳಲ್ಲಿ Drop Out Rate ಪ.ಜಾತಿ / ಪ.ಪಂಗಡಗಳಲ್ಲಿ ಕಡಿಮೆಯಾಗಿರುತ್ತದೆ.

**ಉನ್ನತ ಶಿಕ್ಷಣ :** All India Survey on Higher Education (AISHE) ವರದಿಯ ಪ್ರಕಾರ ಉನ್ನತ ಶಿಕ್ಷಣದಲ್ಲಿ Gross Enrolment Ratio (GER) ಈ ಕೆಳಗಿನಂತಿದೆ.

---4

**GER of Higher Education in Karnataka across social categories (%)**

| Year | 2012-13 | 2016-17 | 2021-22 | Difference between 2016-17 to 2021-22 |
|---|---|---|---|---|
| Overall | 25.4 | 26.5 | 36.2 | 9.7(+) |
| SC | 17 | 18.8 | 27.8 | 9.0(+) |
| ST | 14.1 | 16.5 | 25.8 | 9.3(+) |

(Source: AISHE Reports)

AISHE ವರದಿಯ ಪ್ರಕಾರ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಮತ್ತು ಇತರೆ ವಿದ್ಯಾರ್ಥಿಗಳ GER ನಲ್ಲಿ ಅಂತರವಿರುತ್ತದೆ. ಆದ್ದರಿಂದ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯುವ ಸಲುವಾಗಿ ಹೆಚ್ಚಿನ ಪ್ರೋತ್ಸಾಹ ನೀಡಬೇಕಾಗಿದೆ. ಈ ಕಾರಣಗಳಿಂದ ಎಲ್ಲಾ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ ಮತ್ತು ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹಧನ ಸಹ ನೀಡಲಾಗುತ್ತದೆ. ಅಲ್ಲದೇ ಕ್ರೈಸ್ ವಸತಿ ಶಿಕ್ಷಣ ಶಾಲೆಗಳಲ್ಲಿ 12ನೇ ತರಗತಿಯವರೆಗೆ ಶಿಕ್ಷಣವನ್ನು ಉನ್ನತೀಕರಿಸುವುದು ಅಗತ್ಯವಿರುತ್ತದೆ.

2012-13 ರಿಂದ 2021-22 ರ ಅವಧಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದಲ್ಲಿ GER ಹೆಚ್ಚಾಗಿರುತ್ತದೆ. ಆದರೆ, ಇತರರಿಗೆ ಹೋಲಿಸಿದಾಗ ಪ.ಜಾತಿ- 8, ಪ.ಪಂಗಡ-10 ರಷ್ಟು ಕಡಿಮೆ ಇರುತ್ತದೆ.

(ಟಿಪ್ಪಣಿ: GER ಅಂದರೆ, 18 ರಿಂದ 23 ವಯೋಮಾನದವರ ಒಟ್ಟು ಜನಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವವರ ಸಂಖ್ಯೆಯ ಪ್ರಮಾಣವನ್ನು ಆಧರಿಸಿ GER ಅನ್ನು ನಿಗದಿಪಡಿಸಲಾಗುತ್ತದೆ)

**ಪ್ರಬುದ್ಧ – ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಲು ಧನಸಹಾಯ.**

ಸದರಿ ಯೋಜನೆಯು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ವಿಶ್ವದಲ್ಲಿ 500 ranking ನ ಒಳಗಿರುವ ಉತ್ತಮ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ ಅಧ್ಯಯನ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡಲಾಗುತ್ತದೆ. 2009-10ನೇ ಸಾಲಿನಿಂದ 2013-14ನೇ ಸಾಲಿನವರೆಗೆ 21 ಪ.ಜಾತಿ ಹಾಗೂ ಪ.ಪಂಗಡದ ವಿದ್ಯಾರ್ಥಿಗಳು ಧನಸಹಾಯ ಪಡೆದಿದ್ದು, 2014-15ನೇ ಸಾಲಿನಿಂದ 2024-25ನೇ ಸಾಲಿನವರೆಗೆ 1,044 ಪ.ಜಾತಿ ಹಾಗೂ ಪ.ಪಂಗಡದ ವಿದ್ಯಾರ್ಥಿಗಳು ಧನಸಹಾಯ ಪಡೆದಿರುತ್ತಾರೆ. ಇತ್ತೀಚೆಗಿನ ವರ್ಷಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಧನಸಹಾಯ ಪಡೆಯುತ್ತಿರುವುದನ್ನು ಗಮನಿಸಬಹುದಾಗಿದೆ.

57% ವಿದ್ಯಾರ್ಥಿಗಳು ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, 34% ವಿದ್ಯಾರ್ಥಿಗಳು ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ ಮತ್ತು 9% ವಿದ್ಯಾರ್ಥಿಗಳು ಮಾನವಿಕ ಶಾಸ್ತ್ರ, ಸಮಾಜ ವಿಜ್ಞಾನ, ಕಾನೂನು ಇತ್ಯಾದಿ ಕೋರ್ಸ್‌ಗಳಲ್ಲಿ ಅಧ್ಯಯನ ಕೈಗೊಂಡಿರುತ್ತಾರೆ. ಹೆಚ್ಚಿನ ವಿದ್ಯಾರ್ಥಿಗಳು, USA, UK ಮತ್ತು Australia ಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ.

ವರ್ಷದಿಂದ ವರ್ಷಕ್ಕೆ ವಿದೇಶಿ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯುತ್ತಿರುವ ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಏರಿಕೆಯಾಗಿರುವುದನ್ನು ಈ ಕೆಳಗಿನಂತೆ ಗಮನಿಸಬಹುದು.

2017-2022 ರ ವರೆಗೆ ಪ್ರಬುದ್ಧ ಯೋಜನೆಯಡಿ ಧನಸಹಾಯ ಪಡೆದ ವಿದ್ಯಾರ್ಥಿಗಳ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯಿಂದ ಸಮೀಕ್ಷೆಯನ್ನು ನಡೆಸಿದ್ದು, 65 ವಿದ್ಯಾರ್ಥಿಗಳು ಮಾಹಿತಿಯನ್ನು ಹಂಚಿಕೊಂಡಿರುತ್ತಾರೆ. ಈ 65 ವಿದ್ಯಾರ್ಥಿಗಳಲ್ಲಿ 22 ಮಹಿಳೆಯರು ಮತ್ತು 43 ಪುರುಷರು ಸೇರಿರುತ್ತಾರೆ. ಸರಾಸರಿ ವಯೋಮಾನ – 27.

ಧನಸಹಾಯ ಪಡೆದ ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸಿ ವಿದೇಶಗಳಲ್ಲಿ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉದ್ಯೋಗ ಪಡೆದಿರುವುದನ್ನು ಗಮನಿಸಲಾಗಿದೆ. Amazon, Amcor, Eurostar industry, General Electric, HARMAN International, Hello Fresh, Price Waterhouse Coopers, Quest Global, VIOTAS ಇತ್ಯಾದಿ ಕಂಪನಿಗಳಲ್ಲಿ 39 ಅಭ್ಯರ್ಥಿಗಳು ವಿದೇಶಗಳಲ್ಲಿ ಉದ್ಯೋಗ ಪಡೆದುಕೊಂಡಿರುತ್ತಾರೆ. 11 ವಿದ್ಯಾರ್ಥಿಗಳು ಭಾರತ ದೇಶಕ್ಕೆ ಹಿಂದಿರುಗಿ ವಿವಿಧ ಉದ್ಯೋಗಗಳನ್ನು ಪಡೆದುಕೊಂಡಿರುತ್ತಾರೆ. ಉಳಿದ 15 ಅಭ್ಯರ್ಥಿಗಳು ಉನ್ನತ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ.

**ಆ) ಆರೋಗ್ಯ ವಲಯ :**

ಈ ಕೆಳಗಿನ ಮಾಹಿತಿಯಿಂದ NMR (Neonatal Mortality Rate) IMR (Infant Mortality Rate) ಮತ್ತು 5 ವರ್ಷದ ಕೆಳಗಿನ ಮಕ್ಕಳ ಮರಣ ಪ್ರಮಾಣದಲ್ಲಿ ಇಳಿಕೆಯಾಗುತ್ತಿರುವುದನ್ನು ಗಮನಿಸಬಹುದಾಗಿದೆ. NFHS -5 (National Family and Health Survey) ಪ್ರಕಾರ NMR ರಾಷ್ಟ್ರೀಯ ಸರಾಸರಿ 24.9, IMR ರಾಷ್ಟ್ರೀಯ ಸರಾಸರಿ 35.2 ಹಾಗೂ 5 ವರ್ಷ ಕೆಳಗಿನ ಮಕ್ಕಳ ಮರಣ ಪ್ರಮಾಣ 45.9 ಇರುತ್ತದೆ.

The definition of these indicators is:

- **Neonatal Mortality rate**: Death during the first 28 days of life expressed per 1,000 live births.
- **Infant Mortality Rate:** Number of infant deaths for every 1,000 live births within 1 year
- **Under 5 Mortality rate**: Number of deaths for every 1,000 children within 5 years

**Mortality Indicators across social groups and years**

| Category | 2005-2006 | | | 2015-2016 | | | 2019-2021 | | |
|---|---|---|---|---|---|---|---|---|---|
| | NMR | IMR | Under-5 MR | NMR | IMR | Under-5 MR | NMR | IMR | Under-5 MR |
| SC | 44.8 | 57.2 | 65.4 | 26.4 | 33 | 39.3 | 21.2 | 29.7 | 33.9 |
| ST | 36.0 | 45.8 | 77.9 | 24.3 | 37.7 | 42.3 | 14.1 | 28.7 | 35.6 |
| OBC | 37.3 | 53 | 63.8 | 18.1 | 26.4 | 31.2 | 17.0 | 25.9 | 29.7 |
| Others | 29.0 | 43.5 | 60.4 | 12.2 | 20.9 | 23 | 3.4 | 12.6 | 15.6 |

(Source: NFHS reports)

**ಮಕ್ಕಳಲ್ಲಿ ಪೌಷ್ಠಿಕತೆಯ ಮಟ್ಟದ ವಿವರ ಈ ಕೆಳಗಿನಂತಿದೆ.** (0 – 6 ವರ್ಷಗಳ ಶೇಕಡವಾರು ಜನಸಂಖ್ಯೆ) 2011ರ ಜನಗಣತಿಯಂತೆ ಪ.ಜಾತಿಯ ಮಕ್ಕಳು ಸುಮಾರು 13 ಲಕ್ಷ ಮತ್ತು ಪ.ಪಂಗಡದ ಮಕ್ಕಳು ಸುಮಾರು 5.60 ಲಕ್ಷ.

**Nutritional status of children (6-59 months) across social groups**

| Social Group | 2015-16 | | | 2019-20 | | |
|---|---|---|---|---|---|---|
| | Stunted | Wasting | Under-weight | Stunted | Wasting | Under-weight |
| SC | 39.1 | 27.5 | 40.1 | 39.4 | 22.6 | 37 |
| ST | 39.3 | 25.4 | 40.3 | 39.5 | 21.5 | 35.8 |
| OBC | 36.0 | 25.8 | 32.6 | 33.6 | 18.4 | 31 |
| Others | 32.2 | 25.7 | 33.8 | 32.7 | 16.3 | 31.8 |
| Total | 36.2 | 26.1 | 35.2 | 35.4 | 19.5 | 32.9 |

---6

*Source*: (i) International Institute for Population Sciences (IIPS) and ICF. 2017. National Family Health Survey (NFHS-4), India, 2015-16: Karnataka. Mumbai: IIPS, table 60: Nutritional status of children (Page107 & 114); (ii) International Institute for Population Sciences (IIPS) and ICF. 2021: National Family Health Survey (NFHS-5), India, 2019-20: Karnataka. Mumbai: IIPS. (Page 122 & 130)

- Stunted Growth means : Low height compared to age.
- Wasting means : Low weight compared to height.
- Under weight : Low weight compared to age.

**ಜೀವನ ಮಟ್ಟ ಸುಧಾರಣೆ**

| % of households having access to improved clean drinking water | | | | | |
|---|---|---|---|---|---|
| | **ST** | **SC** | **OBC** | **General** | **Total** |
| 2015-16 | 91 | 90.4 | 90.7 | 89.5 | 90.5 |
| 2019-21 | 93.2 | 93.7 | 92.8 | 92.8 | 93 |
| Difference | 2.2 | 3.3 | 2.1 | 3.3 | 2.5 |
| **% of households having access to improved sanitation facility** | | | | | |
| 2015-16 | 45.1 | 40.3 | 61.2 | 64.4 | 57.4 |
| 2019-21 | 66.2 | 66.9 | 78 | 80.9 | 74.6 |
| Difference | 21.1 | 26.6 | 16.8 | 16.5 | 17.2 |
| **% of households having Pucca Housing Facility** | | | | | |
| 2015-16 | 53.8 | 56.6 | 64.4 | 65.7 | 62.7 |
| 2019-21 | 57.1 | 59.8 | 65.6 | 72.7 | 64.2 |
| Difference | 3.3 | 3.2 | 1.2 | 7 | 1.5 |

(Source: NFHS reports)

**Social Groupwise Consumption Distribution and Poverty in Karnataka: 2011-12 & 2022-23**

| Social Groups | 2011-12 | | 2022-23 | |
|---|---|---|---|---|
| | **Mean monthly per capita consumption** | **Poverty** | **Mean monthly per capita consumption(in 2011-12 prices)** | **Poverty** |
| **RURAL** | | | | |
| ST | 1191.9 | 30.8 | 1996.0 | 5.9 |
| SC | 1281.8 | 37.1 | 2079.5 | 6.0 |
| OBC | 1452.5 | 20.8 | 2137.9 | 7.7 |
| Others | 1409.1 | 21.6 | 2418.0 | 4.1 |
| **Total** | **1395.1** | **24.5** | **2147.9** | **6.7** |

| URBAN | | | | |
|---|---|---|---|---|
| ST | 1867.4 | 33.7 | 3124.8 | 2.4 |
| SC | 1931.2 | 25.0 | 3326.3 | 6.2 |
| OBC | 2441.6 | 15.1 | 3923.9 | 3.1 |
| Others | 4214.2 | 8.8 | 4752.2 | 1.2 |
| **Total** | **2898.9** | **15.3** | **4003.0** | **3.0** |

(NSS consumer expenditure data)